ದಿಃ30.01.2026.

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1016/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಿಶ್ಚಿಂತ್ | ಫ್ರಾ ಸಾಃ 2 |
| ತಂದೆಯ/ಗಂಡನ ಹೆಸರು | : | ಹುಲಿಗೆಪ್ಪ | ಚಾಸಾಃ 2 |
| ವಯಸ್ಸು | : | 27 ವರ್ಷ | |
| ಕೆಲಸ | : | ಚಾಲಕ | ಸಾ ಪ್ರ ಬೋ |
| ವಾಸ | : | ಚಿಕ್ಕಜಾಜೂರು ಗ್ರಾಮ | ದಿಃ30.01.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಚಾಸಾ-1 ಗೊತ್ತು. ಚಾಸಾ-3, 4 ಮತ್ತು 8 ರವರು ಗೊತ್ತಿಲ್ಲ. ಸಾಕ್ಷಿ ತನಿಖಾಧಿಕಾರಿಗಳು ತನಗೆ ನೀಡಿದ ನೋಟೀಸಿನಲ್ಲಿನ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನೋಟೀಸನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರಿನಲ್ಲಿನ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಜಪ್ತಿ ಮಾಡಲಾದ ವಸ್ತುಗಳ ಪಟ್ಟಿಯಲ್ಲಿನ ನನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಮಾದರಿ ಮೊಹರಿನಲ್ಲಿನ ನನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ಮುದ್ದೆ ಮಾಲು-1(ಬಿ) ಎಂದು ಗುರುತಿಸಲಾಯಿತು. ಈ ಮೇಲ್ಕಂಡ ಎಲ್ಲಾ ಸಹಿಗಳನ್ನು ಪೊಲೀಸರು ಚಿಕ್ಕಜಾಜೂರಿನ ಕ್ರಾಸಿನ ಬಳಿ ನನ್ನಿಂದ ಪಡೆದಿರುತ್ತಾರೆ. ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರನ್ನು ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ದಸ್ತಗಿರಿ ಮಾಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ಸಹ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ದಿಃ30.01.2026.

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 29.04.2023 ರಂದು ಅಬಕಾರಿ ನಿರೀಕ್ಷಕರಾದ ಚಾಸಾ-8 ರವರು ಸಂಜೆ 06.30 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕಿನ ಹಿರೇಕಂದವಾಡಿ ಗ್ರಾಮದ ಬಳಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಆರೋಪಿತನು ಕೆ.ಎ-16-ಇಜಿ-7893 ಟಿವಿಎಸ್ ಎಕ್ಸ್‌ಎಲ್ ನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ವಿಚಾರದ ಕುರಿತು ದಾಳಿ ಮಾಡಲು ಸಹಕರಿಸುವಂತೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 06.30 ಕ್ಕೆ ಚಾಸಾ-8 ರವರು ಚಾಸಾ-3 ಮತ್ತು 4 ರವರೊಂದಿಗೆ ನನ್ನನ್ನು ಮತ್ತು ಚಾಸಾ-1 ರವರನ್ನು ಕರೆದುಕೊಂಡು ಚಿತ್ರದುರ್ಗ ಬಿ.ದುರ್ಗ ರಸ್ತೆಯ ಬಳಿ ಬರುವ ಕಲ್ಲವ್ವನಾಗತೀಹಳ್ಳಿ ಗ್ರಾಮದ ಸಮೀಪ ಇರುವ ಗ್ರೀನ್‌ವಿಂಡ್ ಪವರ್ ಸೆಂಟರ್ ಮುಂಭಾಗ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿತನು ಅಕ್ರಮವಾಗಿ 17.280 ಲೀ ಮದ್ಯವನ್ನು ಬೈಕಿನಲ್ಲಿ ತೆಗೆದುಕೊಂಡು ಬರುತ್ತಿದ್ದು, ಅದನ್ನು ಚಾಸಾ-8 ರವರು ಮಹಜರಿನ ಮೂಲಕ ರಾತ್ರಿ 06.30 ರಿಂದ 07.15 ರವರೆಗೆ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ಮಹಜರಿಗೆ ಸಹಕರಿಸಿ, ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ನಾನು ತನಿಖಾಧಿಕಾರಿಗೆ ದಿಃ 24.07.2023 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಪಕ್ಕದ ಗ್ರಾಮದವರೇ ಆದ ಕಾರಣ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.